1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಯವರ ನ್ಯಾಯಾಲಯ, ಕುಂದಾಪುರ
ಸಿ.ಸಿ. ನಂಬ್ರ:2794/2016

ಚಾಸಾ:4 ಪ್ರಾಸಾ:5

ದಿನಾಂಕ: 06.07.2026

| | | |
|---|---|---|
| ವಾಗ್ಮೂಲದವರ ಹೆಸರು | : | ಶ್ರೀ ಕಿರಣ್ |
| ತಂದೆಯ ಹೆಸರು | : | ಪ್ರಭಾಕರ ಆಚಾರ್ |
| ವಯಸ್ಸು | : | 48 ವರ್ಷ |
| ಉದ್ಯೋಗ | : | ಇಂಜಿನಿಯರ್ |
| ವಾಸ ಸ್ಥಳ | : | ಬೆಂಗಳೂರು |

ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

**ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ.ರವರಿಂದ:**

ಚಾಸಾ-1 ನನ್ನ ತಂಗಿ. ಚಾಸಾ-2 ನನ್ನ ತಾಯಿ. ಚಾಸಾ-3 ನನ್ನ ಅಣ್ಣ ಹಾಗೂ ಚಾಸಾ-12 ನನ್ನ ಅಕ್ಕ.

ದಿ: 18-11-2005 ರಂದು ಚಾಸಾ-1 ಮತ್ತು 1ನೇ ಆರೋಪಿಗೆ ಮದುವೆ ಮಾಡಿಕೊಟ್ಟಿರುತ್ತೇವೆ. ರಮೇಶರವರ ತಾಯಿ ರಾಜಮ್ಮ, ಅಕ್ಕ ಸುಶೀಲ, ಅಕ್ಕನ ಮಗಳು ಗಿರಿಜಾರವರು 2005 ನೇ ಇಸವಿಯಲ್ಲಿ ಚಾಸಾ-1 ರವರನ್ನು ನೋಡಲು ಬಂದಿರುತ್ತಾರೆ. ಅವರು ಬಂದಾಗ ರೂಪಾಯಿ 5 ಲಕ್ಷ ಹಣ ಹಾಗೂ 40 ಪವನ್ ಚಿನ್ನವನ್ನು ವರದಕ್ಷಿಣೆಯಾಗಿ ಕೇಳಿದ್ದರು. ಅದಕ್ಕೆ ನಾವು ಆಗುವುದಿಲ್ಲವೆಂದು ನಿರಾಕರಿಸಿರುತ್ತೇವೆ. ಮದುವೆ ತಪ್ಪುತ್ತದೆ ಎಂದು 2 ಲಕ್ಷ ಹಾಗೂ 24 ಪವನ್ ಚಿನ್ನಕ್ಕೆ ಒಪ್ಪಿ ಕೊಂಡಿರುತ್ತೇವೆ. ನಮ್ಮ ಕಡೆಯಿಂದ ನಾನು, ಚಾಸಾ-2, 3 ಮತ್ತು 5 ರವರು ಇದ್ದೇವು.

ದಿ: 18-11-2005 ರಂದು ಕೊಟೇಶ್ವರದ ಸರಸ್ವತಿ ಕಲ್ಯಾಣ ಮಂಟಪದಲ್ಲಿ ಚಾಸಾ-1 ಮತ್ತು 1ನೇ ಆರೋಪಿಯ ವಿವಾಹವಾಗಿರುತ್ತದೆ. ಆರೋಪಿತರು ನಿಶ್ಚಿತಾರ್ಥದ ಒಂದು ವಾರದ ಮೊದಲೇ ಬಂದು ಸದ್ರಿ ರೂಪಾಯಿ 2ಲಕ್ಷ ಹಣವನ್ನು ತೆಗೆದುಕೊಂಡು ಹೋಗಿದ್ದರು. ಮದುವೆ ಸಮಯದಲ್ಲಿ ಚಾಸಾ-1 ರವರಿಗೆ ಒಂದು ನೆಕ್ಲೇಸು, 7 ಬಳೆಗಳು, ಕಿವಿ ಮತ್ತು ಕೈ ಉಂಗುರುಗಳು ಹಾಗೂ ಒಂದು ದೊಡ್ಡ ಚೈನು ಒಟ್ಟು ಹೀಗೆ 24 ಪವನ್ ಚಿನ್ನವನ್ನು ಹಾಕಿರುತ್ತೇವೆ. 1ನೇ ಆರೋಪಿಗೆ ಚೈನು, ಬ್ರಾಸ್ಲೇಟು, ಉಂಗುರು, ಬೆಳ್ಳಿಯ ಪಾತ್ರೆಗಳನ್ನು ಕೊಟ್ಟಿರುತ್ತೇವೆ.

ಮದುವೆಯಾದ ನಂತರ ಬೆಂಗಳೂರಿಗೆ ಚಾಸಾ-1 ರವರನ್ನು ಕರೆದುಕೊಂಡು ಹೋಗಿರುತ್ತಾರೆ. ಸ್ವಲ್ಪ ದಿನ ಚೆನ್ನಾಗಿ ನೋಡಿಕೊಂಡು ನಂತರ ಜಾಸ್ತಿ ವರದಕ್ಷಿಣೆ ತರಲಿಲ್ಲ ಎಂದು ಆರೋಪಿಗಳು ಚಾಸಾ-1 ರವರಿಗೆ ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ ಹಾಗೂ 1ನೇ ಆರೋಪಿಯ ತಮ್ಮ ಲೊಕೇಶ್ ಸಹ ಬಂದು ಬೈಯುತ್ತಿದ್ದರು. ಒಂದು ದಿನ ಆರೋಪಿತರು ಇದ್ದ ಸಮಯದಲ್ಲಿ ಲೊಕೇಶ್ ಮನೆಗೆ ಬಂದು ಚಾಸಾ-1 ರವರಿಗೆ ಹಲ್ಲೆ ಮಾಡಿ ಹೋಗಿರುತ್ತಾರೆ. ಆಗ 1ನೇ ಆರೋಪಿ ಏನನ್ನೂ ಮಾತನಾಡಿರುವುದಿಲ್ಲ. ಚಾಸಾ-1ರವರು 1ನೇ ಆರೋಪಿಯ ತಾಯಿಯ ಹತ್ತಿರ ಕೇಳಿದಾಗ ಅವರು ಆತನು ಮದ್ಯಪಾನ ಮಾಡಿ ಬಂದು ಹೊಡೆಯುತ್ತಾನೆ ಏನು ಮಾಡಬೇಕಾಗುತ್ತೇ ನೀನೇ ಸುಧಾರಿಸಿಕೊಂಡು ಹೋಗಬೇಕು ಎಂದು ಹೇಳಿರುತ್ತಾರೆ. ಚಾಸಾ-1 ರವರಿಗೆ ನಿಮ್ಮ ಮನೆಯವರು ಸರಿ ಇಲ್ಲ ಎಂದು ಹೀಯಾಳಿಸುತ್ತಿದ್ದರು. ಅವಾಚ್ಯ ಶಬ್ದಗಳಿಂದ ಬೈಯುತ್ತಿದ್ದರು.

ಆ ಸಮಯದಲ್ಲಿ ಚಾಸಾ-1 ರವರು New Horizon Collegeನಲ್ಲಿ ಲ್ಯಾಬ್ Instructor ಆಗಿ ಕೆಲಸ ಮಾಡುತ್ತಿದ್ದರು. ಚಾಸಾ-1 ರವರ ATM and Debit Card ಗಳನ್ನು ಆರೋಪಿ ಇಟ್ಟುಕೊಂಡು ಹಣವನ್ನು ಪಡೆಯುತ್ತಿದ್ದರು. ಚಾಸಾ-1 ರವರಿಗೆ ಆರೋಗ್ಯ ಸರಿ ಇಲ್ಲದೆ ಇದ್ದರೂ ಕೂಡ ಅವರ ಬಗ್ಗೆ ಗಮನ ಹರಿಸುತ್ತಿದ್ದರಲಿಲ್ಲ. ಚಾಸಾ-1 ರವರಿಗೆ ಶಸ್ತ್ರಚಿಕಿತ್ಸೆ ಆಗಿದ್ದಾಗ ನಾನು ಎಲ್ಲಾ ಖರ್ಚುಗಳನ್ನು ಭರಿಸಿರುತ್ತೇನೆ. ಚಾಸಾ-1 ರವರಿಗೆ ಯಾವಾಗಲೂ ಆರೋಗ್ಯ ಸರಿ ಇಲ್ಲದೆ ಇದ್ದಾಗ ಚಿಕಿತ್ಸೆ ಕೊಡಿಸಿರುವುದಿಲ್ಲ.

ಚಾಸಾ-1ರವರಿಗೆ ಸಂಬಂಧಪಟ್ಟ ಚೆಕ್ಕು ಪುಸ್ತಕವನ್ನು 1ನೇ ಆರೋಪಿಯೇ ಇಟ್ಟು ಕೊಂಡು 4-5 ಚೆಕ್ಕುಗಳಿಗೆ ಸಹಿಯನ್ನು ಪಡೆದು ದಾಖಲೆಗಳನ್ನು ಪೋರ್ಜರಿ ಮಾಡಿರುತ್ತಾರೆ. ಇದರಿಂದಾಗಿ ಶಿಖಾರಿಪುರ ನ್ಯಾಯಾಲಯದಲ್ಲಿ ಚೆಕ್ಕು ಬೌನ್ಸ್ ಸಹ ಚಾಸಾ-1 ರವರ ವಿರುದ್ದ ಹಾಕಿದ್ದರು. ಚಾಸಾ-1 ರವರಿಗೆ ಆ ಬಗ್ಗೆ ಏನೂ ಗೊತ್ತಿದ್ದಿರಲಿಲ್ಲ. ಪುನಃ ಚಾಸಾ-1 ರವರಿಗೆ ಆರೋಗ್ಯ ಸರಿ ಇಲ್ಲದೆ ಇದ್ದಾಗ ಆರೋಪಿಗಳು ಅವರನ್ನು ನೋಡಿಕೊಂಡಿರುವುದಿಲ್ಲ ಆ ಕಾರಣ ಚಾಸಾ-1 ರವರು ನನಗೆ ತಿಳಿಸಿದ್ದು ಅದರಂತೆ ನಾನು ಚಾಸಾ-1 ರವರನ್ನು ಕುಂದಾಪುರಕ್ಕೆ ಕರೆದುಕೊಂಡು ಬಂದಿರುತ್ತೇನೆ. ಇಲ್ಲಿ ತೋರಿಸಿದಾಗ ಚಾಸಾ-1ರವರು ಗರ್ಭಿಣಿ ಎಂದು ಗೊತ್ತಾಗಿರುತ್ತದೆ. ಆ ವಿಚಾರವನ್ನು ಚಾಸಾ-1 ರವರು ಆರೋಪಿಗೆ ತಿಳಿಸಿದಾಗ ಅವಾಚ್ಯ ಶಬ್ದದಿಂದ ಬೈದಿರುತ್ತಾರೆ.

ದಿಃ 27-12-2013 ರಂದು ಚಾಸಾ-1ರವರು ಗಂಡು ಮಗುವಿಗೆ ಜನ್ಮ ನೀಡಿದ್ದು ಸದ್ರಿ ವಿಚಾರವನ್ನು 1ನೇ ಆರೋಪಿಗೆ ತಿಳಿಸಿರುತ್ತಾರೆ. ಅನಂತರ ದಿಃ 28-12-2013ರಂದು ಆರೋಪಿಗಳು

ಚಾಸಾ-1 ರವರನ್ನು ನೋಡಲು ಬಂದಿದ್ದು ಆದರೆ 1ನೇ ಆರೋಪಿ ಯಾವುದೇ ಖರ್ಚನ್ನು ಕೊಟ್ಟಿರುವುದಿಲ್ಲ. ಚಾಸಾ-1 ರವರು ಕುಂದಾಪುರಕ್ಕೆ ಬರುವ ಸಮಯದಲ್ಲಿ 1ನೇ ಆರೋಪಿ ನೀನು ಪುನಃ ನಮ್ಮ ಮನೆಗೆ ಬರಬೇಡ ನಿನಗೆ ವಿಚ್ಛೇಧನೆ ಕೊಡುತ್ತೇನೆ ಎಂದು ಹೇಳಿದ್ದನು.

1ನೇ ಆರೋಪಿಯ ಮಾವ ಮುಕುಂದ ಎಂಬುವರು ರಾಜಿ ಮಾಡಿಕೊಂಡು ಮಗುವಿನ ನಾಮಕರಣಕ್ಕೆ ಕರೆದುಕೊಂಡು ಬಂದಿದ್ದರು. ಮಗನಿಗೆ ಪ್ರಸಿದ್ದ್ ಎಂದು ಹೆಸರು ಇಟ್ಟಿರುತ್ತಾರೆ. ಮುಕುಂದ ಜೀವಂತ ಇದ್ದಾಗ 2-3 ಬಾರಿ ರಾಜಿ ಪಂಚಾಯಿತಿ ಮಾಡಿದ್ದರು. ಆದರೆ 1ನೇ ಆರೋಪಿ ಪುನಃ ಅದೇ ಚಾಳಿಯನ್ನು ಮುಂದುವರೆಸಿರುತ್ತಾರೆ. ಅನಂತರ ಮುಕುಂದರವರು ಮರಣ ಹೊಂದಿರುತ್ತಾರೆ. ಚಾಸಾ-1 ರವರನ್ನು ವಾಪಸ್ಸು ಕರೆದುಕೊಂಡು ಹೋಗಿರುವುದಿಲ್ಲ. ಪದೇ ಪದೇ ಚಾಸಾ-1 ರವರಿಗೆ ಹಣ ತೆಗೆದುಕೊಂಡು ಬಾ ಎಂದು ಪೀಡಿಸುತ್ತಿದ್ದರು.

ಚಾಸಾ-1ರವರು ಸಾಕಷ್ಟು ಸಹಿಸಿಕೊಂಡಿದ್ದು ಅನಂತರ ಸಹಿಸಿಕೊಳ್ಳಲಾಗದೆ ದಿಃ 26-04-2016 ರಂದು ಚಾಸಾ-1 ರವರು ದೂರನ್ನು ನೀಡಿರುತ್ತಾರೆ. ಇಲ್ಲಿಯವರೆಗೂ ಮಗುವನ್ನು ನೋಡಿಕೊಂಡಿರುವುದಿಲ್ಲ. ದೂರನ್ನು ಕೊಡುವ ಮೊದಲು ಆರೋಪಿಗಳು ಮನೆಯ ಹತ್ತಿರ ಬಂದು ನಾನು 2ನೇ ಮದುವೆಯಾಗುತ್ತೇನೆ ತೊಂದರೆ ಕೊಡಲು ಬಂದರೆ ನಿನ್ನನ್ನು, ನಿನ್ನ ತಾಯಿ ಹಾಗೂ ಸಹೋದರರನ್ನು ನೋಡಿಕೊಳ್ಳುತ್ತೇನೆ ಎಂದು ಬೆದರಿಕೆ ಹಾಕಿರುತ್ತಾರೆ. ರೂಪಾಯಿ 2 ಲಕ್ಷ ಹಣ ಹಾಗೂ 24 ಪವನ್ ಚಿನ್ನವನ್ನು ಇದುವರೆಗೂ ವಾಪಸ್ಸು ಕೊಟ್ಟಿರುವುದಿಲ್ಲ.

ಚಾಸಾ-1 ಮತ್ತು ಅವರ ಮಗುವನ್ನು ನಾವೇ ನೋಡಿಕೊಳ್ಳುತ್ತಿದ್ದೇವೆ. ದಿಃ 16-05-2016 ರಂದು ಪೊಲೀಸರು ಮಹಜರಿಗೆ ಮನೆಯ ಹತ್ತಿರ ಬಂದಿದ್ದರು. ಚಿನ್ನಾಭರಣವನ್ನು ಗಾಯತ್ರಿ ಜ್ಯುವೆಲ್ಲರ್ ಕುಂದಾಪುರದಲ್ಲಿ ಮಾಡಿಸಿರುತ್ತೇವೆ. ಪೊಲೀಸರಿಗೆ ಈ ಬಗ್ಗೆ ನಾನು ಹೇಳಿಕೆ ನೀಡಿರುತ್ತೇನೆ.

**ವಾಟೀ ಸವಾಲುಃ ಆರೋಪಿತರ ಪರ ವಕೀಲರಾದ ಶ್ರೀ ಎಂ ಡಿ ಎಸ್ ರವರಿಂದಃ**

ನಿಮ್ಮ ತಂಗಿ ಈಗ ಎಲ್ಲಿ ಇದ್ದಾರೆ ಎಂದರೆ ಸಾಕ್ಷಿ ಕುಂದಾಪುರದಲ್ಲಿ ಎಂದು ನುಡಿಯುತ್ತಾರೆ. ಮಗ ಎಲ್ಲಿ ಇರುವುದು ಎಂದರೆ ಸಾಕ್ಷಿ ಬೆಂಗಳೂರಿನಲ್ಲಿ ನಮ್ಮ ಜೊತೆಗೆ ಸುಮಾರು 8-9 ವರ್ಷಗಳಿಂದ ಇದ್ದಾರೆ ಎಂದು ನುಡಿಯುತ್ತಾರೆ. ಚಾಸಾ-1 ರವರ ಮದುವೆ ಸಮಯದಲ್ಲಿ ನೀವು ಎಲ್ಲಿ ಇದ್ದಿದ್ದು ಎಂದರೆ ಸಾಕ್ಷಿ ಬೆಂಗಳೂರಿನಲ್ಲಿ ಎಂದು ನುಡಿಯುತ್ತಾರೆ. ಚಾಸಾ-12 ರವರು ಬೆಂಗಳೂರಿನಲ್ಲಿ ಇರುವುದು ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಚಾಸಾ-12 ರವರು ವಿವಾಹ ವಿಚ್ಛೇಧನ ಪಡೆದು 2ನೇ ಮದುವೆಯಾಗಿರುತ್ತಾರೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಚಾಸಾ-1 ರವರು

ಸಹ ಏಕಪಕ್ಷೀಯ ವಿವಾಹ ವಿಚ್ಛೇಧನ ಆದೇಶ ಪಡೆದಿರುತ್ತಾರೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. 1ನೇ ಆರೋಪಿಗೆ ಮದುವೆ ಸಮಯದಲ್ಲಿ ಸ್ವಂತ ಕಂಪೆನಿ ಇತ್ತು ಎಂದರೆ ಸಾಕ್ಷಿ ಇಲ್ಲ ಯಾವುದೋ ಕಂಪೆನಿಯಲ್ಲಿ ಕೆಲಸ ಮಾಡುತ್ತಿದ್ದರು ಎಂದು ನುಡಿಯುತ್ತಾರೆ. 1ನೇ ಆರೋಪಿಗೆ ಬೆಂಗಳೂರಿನಲ್ಲಿ ಮನೆ ಇತ್ತಾ ಎಂದರೆ ಸಾಕ್ಷಿ ಅವರ ತಂದೆಯವರ ಮನೆ ಇತ್ತು ಎಂದು ನುಡಿಯುತ್ತಾರೆ.

ಸಂಬಂಧವನ್ನು ಯಾರು ಮಾಡಿಸಿಕೊಟ್ಟಿದ್ದು ಎಂದರೆ ಸಾಕ್ಷಿ ಪುತೂ2ರಿನ ಬ್ರೋಕರ್ ಎಂದು ನುಡಿಯುತ್ತಾರೆ. ಮದುವೆ ಪೂರ್ವದಲ್ಲಿ ಆರೋಪಿಗಳ ಬಗ್ಗೆ ತಿಳಿದುಕೊಂಡಿರುತ್ತೀರಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಆರ್ಥಿಕವಾಗಿ ಆರೋಪಿಗಳು ಸದೃಡರಾಗಿದ್ದರು ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಮದುವೆ ಮಾತುಕತೆ ಸಂಬಂಧ ಆರೋಪಿಗಳು ಎಷ್ಟು ಬಾರಿ ಬಂದಿರುತ್ತಾರೆ ಎಂದರೆ ಸಾಕ್ಷಿ 2-3 ಬಾರಿ ಬಂದಿದ್ದರು ಎಂದು ನುಡಿಯುತ್ತಾರೆ. ಮೊದಲನೇ ಬಾರಿಗೆ ನಿಮ್ಮ ಮನೆಗೆ ಯಾರೆಲ್ಲಾ ಬಂದಿದ್ದರು ಎಂದರೆ ಸಾಕ್ಷಿ 1ನೇ ಆರೋಪಿ, ಅವರ ಭಾವ, ಅಕ್ಕ, ತಾಯಿ, ಮುಕುಂದ ಮತ್ತು ಅವರ ಹೆಂಡತಿ ಇದ್ದರು ಎಂದು ನುಡಿಯುತ್ತಾರೆ. 2ನೇ ಬಾರಿಗೆ ನಿಮ್ಮ ಮನೆಗೆ ಯಾರೆಲ್ಲಾ ಬಂದಿರುತ್ತಾರೆ ಎಂದರೆ ಸಾಕ್ಷಿ ಮುಕುಂದ ಮತ್ತು 1ನೇ ಆರೋಪಿ ಎಂದು ನುಡಿಯುತ್ತಾರೆ. ವರದಕ್ಷಿಣೆಯನ್ನು ಯಾವಾಗ ಕೇಳಿದ್ದರು ಎಂದರೆ ಸಾಕ್ಷಿ ಮೊದಲನೇ ಬಾರಿ ಬಂದಾಗಲೇ ಕೇಳಿದ್ದರು ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರೆದು ಮದುವೆಯ ಖರ್ಚು, Receptionನ ಅರ್ಧ ಖರ್ಚು ಹಾಗೂ ಕುಂದಾಪುರಕ್ಕೆ ಬರುವ ಬಸ್ಸಿನ ಖರ್ಚನ್ನು ನಾವೇ ಭರಿಸಬೇಕೆಂದು ಹೇಳಿದ್ದರು ಎಂದು ನುಡಿಯುತ್ತಾರೆ.

ಆರೋಪಿಗಳು ಎಷ್ಟು ಹಣ ಮತ್ತು ಚಿನ್ನವನ್ನು ಕೇಳಿರುತ್ತಾರೆ ಎಂದರೆ ಸಾಕ್ಷಿ 5 ಲಕ್ಷ ಹಣ ಹಾಗೂ 24 ರಿಂದ 30 ಪವನ್ ಚಿನ್ನ ಕೇಳಿದ್ದರು ಎಂದು ನುಡಿಯುತ್ತಾರೆ. ನೀವು ಎಷ್ಟು ಕೊಡಲು ಒಪ್ಪಿದ್ದೀರಿ ಎಂದರೆ ಸಾಕ್ಷಿ 2 ಲಕ್ಷ ಹಣ ಹಾಗೂ 24 ಪವನ್ ಚಿನ್ನ ಎಂದು ನುಡಿಯುತ್ತಾರೆ. ಸದ್ರಿ ಹಣ ಮತ್ತು ಚಿನ್ನವನ್ನು ಯಾವಾಗ ಕೊಟ್ಟಿರುತ್ತೀರಿ ಎಂದರೆ ಸಾಕ್ಷಿ ಚಿನ್ನವನ್ನು ಮದುವೆ ಸಮಯದಲ್ಲಿ ಕೊಟ್ಟಿರುತ್ತೇವೆ ಹಾಗೂ ಹಣವನ್ನು ನಿಶ್ಚಿತಾರ್ಥದ ಒಂದು ವಾರದ ಮೊದಲು ಕೊಟ್ಟಿರುತ್ತೇವೆ ಎಂದು ನುಡಿಯುತ್ತಾರೆ. ನಿಶ್ಚಿತಾರ್ಥ ಯಾವಾಗ ಆಗಿದ್ದು ಎಂದರೆ ಸಾಕ್ಷಿ ದಿನಾಂಕ ನೆನಪಿರುವುದಿಲ್ಲ ಎಂದು ನುಡಿಯುತ್ತಾರೆ. ಹಣವನ್ನು ಯಾವಾಗ ಕೊಟ್ಟಿರುತ್ತೀರಿ ಎಂದರೆ ಸಾಕ್ಷಿ ದಿನಾಂಕ ನೆನಪಿರುವುದಿಲ್ಲ ಎಂದು ನುಡಿಯುತ್ತಾರೆ.

ಮದುವೆಯಲ್ಲಿ ಸಾಮಾನ್ಯವಾಗಿ ಹೆಣ್ಣು ಮಕ್ಕಳಿಗೆ ಚಿನ್ನ ಹಾಕುವುದು ವಾಡಿಕೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸದ್ರಿ 24 ಪವನ್ ಚಿನ್ನ ಮೊದಲೇ ಇತ್ತಾ ಅಥವಾ ಆರೋಪಿಗಳು ಕೇಳಿದ ನಂತರ ಮಾಡಿಸಿರುತ್ತೀರಾ ಎಂದರೆ ಸಾಕ್ಷಿ ನಂತರ ಮಾಡಿಸಿರುತ್ತೇವೆ ಎಂದು ನುಡಿಯುತ್ತಾರೆ. ಯಾವ ವರ್ಷದಲ್ಲಿ ಚಿನ್ನ ಮಾಡಿಸಿರುತ್ತೀರಿ ಎಂದರೆ ಸಾಕ್ಷಿ 2005ರಲ್ಲಿ ಎಂದು ನುಡಿಯುತ್ತಾರೆ. ಯಾವೆಲ್ಲಾ ಚಿನ್ನಗಳನ್ನು ಮಾಡಿಸಬೇಕೆಂದು ಪಟ್ಟಿ ನೀಡಿರುತ್ತಾರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಎಲ್ಲಿ 2005ರಲ್ಲಿ ಚಿನ್ನವನ್ನು ಮಾಡಿಸಿರುತ್ತೀರಿ ಎಂದರೆ ಸಾಕ್ಷಿ ಗಾಯತ್ರಿ ಜ್ಯುವೆಲ್ಲರಿಯಲ್ಲಿ ಎಂದು ನುಡಿಯುತ್ತಾರೆ.

2 ಲಕ್ಷ ಹಣವನ್ನು ಕೊಟ್ಟಿರುತ್ತೇವೆ ಎಂದು ಹೇಳಿರುವ ಪೂರ್ವದಲ್ಲಿ 7 ಪವನ್ ಚಿನ್ನವನ್ನು 1ನೇ ಆರೋಪಿಗೆ ಕೊಟ್ಟಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಚಿನ್ನವನ್ನು ಮಾಡಿಸಲು ನೀವು ಹೋಗಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ನನ್ನ ತಂಗಿ ಮತ್ತು ತಾಯಿ ಹೋಗಿದ್ದರು ಎಂದು ನುಡಿಯುತ್ತಾರೆ. ಎಷ್ಟು ವರ್ಷ ಸಂಸಾರ ಚೆನ್ನಾಗಿ ಮಾಡಿರುತ್ತಾರೆ ಎಂದರೆ ಸಾಕ್ಷಿ 2-3 ವರ್ಷ ಎಂದು ನುಡಿಯುತ್ತಾರೆ. ನೀವು ಚಾಸಾ-1 ರವರ ಬೆಂಗಳೂರಿನ ಮನೆಗೆ ಹೋಗಿ ಬರುತ್ತಿದ್ದರಾ ಎಂದರೆ ಸಾಕ್ಷಿ ಅಪರೂಪಕ್ಕೆ ಹೋಗಿ ಬರುತ್ತಿದ್ದೇನು ಎಂದು ನುಡಿಯುತ್ತಾರೆ. ಎಷ್ಟು ಬಾರಿ ಹೋಗಿರುತ್ತೀರಿ ಎಂದರೆ ಸಾಕ್ಷಿ 2-3 ಬಾರಿ ಎಂದು ನುಡಿಯುತ್ತಾರೆ.

ಯಾವ ವಿಚಾರಕ್ಕೆ ತೊಂದರೆ ಕೊಡುತ್ತಿದ್ದರು ಎಂದರೆ ಸಾಕ್ಷಿ ಹೆಚ್ಚಿನ ವರದಕ್ಷಿಣೆ ಕೊಡಬೇಕೆಂದು 1ನೇ ಆರೋಪಿ ಬೆಂಗಳೂರಿನಲ್ಲಿ ಹೇಳಿದ್ದರು ಎಂದು ನುಡಿಯುತ್ತಾರೆ. ಆ ಸಮಯದಲ್ಲಿ ಯಾರು ಯಾರು ಇದ್ದರು ಎಂದರೆ ಸಾಕ್ಷಿ ನನ್ನನ್ನು ಅವರ ಮನೆಗೆ ಕರೆದಾಗಲೇ ಕೇಳಿದ್ದರು ಎಂದು ನುಡಿಯುತ್ತಾರೆ. ಆ ಸಮಯದಲ್ಲಿ ಚಾಸಾ-1 ಇದ್ದಿರಬಹುದು ಎಂದು ನುಡಿಯುತ್ತಾರೆ. ನೀವು ಏನು ಹೇಳಿದ್ದೀರಿ ಎಂದರೆ ಸಾಕ್ಷಿ ಮದುವೆಗೆ ಕೊಟ್ಟ ಹಣ ಮಾತ್ರ ನಾವು ಕೊಡುವುದು ಹೆಚ್ಚಿನ ಹಣ ಕೊಡುವುದಿಲ್ಲ ಎಂದು ಹೇಳಿದ್ದೇನು ಎಂದು ನುಡಿಯುತ್ತಾರೆ. ಪುನಃ ನೀವು 1ನೆ ಆರೋಪಿಯ ಮನೆಗೆ ಹೋಗಿರುತ್ತೀರಾ ಎಂದರೆ ಸಾಕ್ಷಿ ಹೌದು ಚಾಸಾ-1 ರವರಿಗೆ 1ನೇ ಆರೋಪಿ ತಮ್ಮ ಹಲ್ಲೆ ಮಾಡಲು ಬಂದಿದ್ದರು ಎಂದು ಹೇಳಿದಾಗ ಹೋಗಿದ್ದೇನು ಎಂದು ನುಡಿಯುತ್ತಾರೆ. ಸದ್ರಿ ವಿಷಯವನ್ನು ನಿಮ್ಮ ಕುಟುಂಬದ ಸದಸ್ಯರಿಗೆ ಅದೇ ಸಂದರ್ಭದಲ್ಲಿ ಹೇಳಿರುತ್ತೀರಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ.

ನೀವು ಪ್ರಥಮವಾಗಿ ಚಾಸಾ-1 ರವರನ್ನು ನೋಡಿದಾಗ ಅವರಿಗೆ ಪೆಟ್ಟಾದ ಬಗ್ಗೆ ಗಾಯಗಳು ಆಗಿದ್ದವಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಆ ಸಮಯದಲ್ಲಿ ದೂರನ್ನು ಕೊಡಲು ತೊಂದರೆ ಇತ್ತಾ ಎಂದರೆ ಸಾಕ್ಷಿ ನಾವು ಮಾತುಕತೆ ಮೂಲಕ ಇತ್ಯರ್ಥ ಮಾಡಿಕೊಳ್ಳುವಾ ಎಂದು ಕೊಟ್ಟಿರುವುದಿಲ್ಲ ಎಂದು ನುಡಿಯುತ್ತಾರೆ. ಈ ಸಂಬಂಧ ನೀವು ಮಾತುಕತೆ ಮಾಡಿರುತ್ತೀರಾ ಎಂದರೆ ಸಾಕ್ಷಿ ಹೌದು 1ನೇ ಆರೋಪಿಯ ಮನೆಯಲ್ಲಿ ಅವರ ಮಾವನವರ ಜೊತೆಗೆ ಮಾಡಿದ್ದೇವು ಎಂದು ನುಡಿಯುತ್ತಾರೆ. ನಿಮ್ಮ ಮನೆಯವರನ್ನು ಹೊರತುಪಡಿಸಿ ಬೇರೆ ಯಾರು ಇದ್ದರು ಎಂದರೆ ಸಾಕ್ಷಿ ಮುಕುಂದರವರು ಇದ್ದರು ಎಂದು ನುಡಿಯುತ್ತಾರೆ. ಮಾತುಕತೆಯ ನಂತರ ಎಷ್ಟು ವರ್ಷ ಸಂಸಾರ ಮಾಡಿರುತ್ತಾರೆ ಎಂದರೆ ಸಾಕ್ಷಿ 3 ವರ್ಷ ಎಂದು ನುಡಿಯುತ್ತಾರೆ.

ಚಾಸಾ-1 ರವರ ಚೆಕ್ಕು ಹಾಗೂ ಡೆಬಿಟ್ ಕಾರ್ಡನ್ನು ದುರಪಯೋಗಪಡಿಸಿಕೊಂಡ ವಿಚಾರವನ್ನು ನಿಮಗೆ ಯಾವಾಗ ಹೇಳಿದ್ದರು ಎಂದರೆ ಸಾಕ್ಷಿ 2006-07ರಲ್ಲಿ ಎಂದು ನುಡಿಯುತ್ತಾರೆ. ಆ ಸಂದರ್ಭದಲ್ಲೂ ನೀವು ಎಲ್ಲಿಯೂ ದೂರನ್ನು ಕೊಟ್ಟಿರುವುದಿಲ್ಲ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಚಾಸಾ-1 ರವರು ಯಾವಾಗ ಊರಿಗೆ ಬಂದಿದ್ದು ಎಂದರೆ ಸಾಕ್ಷಿ ಮೇ 2013ರಲ್ಲಿ ಎಂದು ನುಡಿಯುತ್ತಾರೆ. ಯಾವ ಕಾರಣಕ್ಕೆ ಕರೆದುಕೊಂಡು ಬಂದಿದ್ದು ಎಂದರೆ ಸಾಕ್ಷಿ ಚಾಸಾ-1 ರವರಿಗೆ ಹುಷಾರು ಇಲ್ಲದ ಕಾರಣ ಆಸ್ಪತ್ರೆಗೆ ತೋರಿಸಲು ಆರೋಪಿಗಳ ಮನೆಯಿಂದ ಕರೆದುಕೊಂಡು ಬಂದಿರುತ್ತೇನೆ ಎಂದು ನುಡಿಯುತ್ತಾರೆ. ಆಗ ಪ್ರಸಿದ್ದರವರಿಗೆ ಎಷ್ಟು ವರ್ಷ ಎಂದರೆ ಸಾಕ್ಷಿ ಮಗು ಜನಿಸಿದ್ದಿರಲಿಲ್ಲ ಎಂದು ನುಡಿಯುತ್ತಾರೆ. ನಂತರ ಚಾಸಾ-1 ರವರು ಆರೋಪಿಗಳ ಮನೆಗೆ ಹೋಗಿರುತ್ತಾರಾ ಎಂದರೆ ಸಾಕ್ಷಿ ಹೌದು 2014ರಲ್ಲಿ ಎಂದು ನುಡಿಯುತ್ತಾರೆ. ಎಷ್ಟು ವರ್ಷ ಆರೋಪಿಗಳ ಮನೆಯಲ್ಲಿ ಇದ್ದರು ಎಂದರೆ ಸಾಕ್ಷಿ 1 ವರ್ಷ ಎಂದು ನುಡಿಯುತ್ತಾರೆ. ನಂತರ ಯಾವಾಗ ಬಂದಿರುತ್ತಾರೆ ಎಂದರೆ ಸಾಕ್ಷಿ ಏಪ್ರಿಲ್ 2016ರಲ್ಲಿ ಎಂದು ನುಡಿಯುತ್ತಾರೆ. ಆಗಲೂ ನೀವೇ ಕರೆದುಕೊಂಡು ಬಂದಿರುತ್ತಿರಾ ಎಂದರೆ ಸಾಕ್ಷಿ ಇಲ್ಲ ಅವರೇ ಬಂದಿರುತ್ತಾರೆ ಎಂದು ನುಡಿಯುತ್ತಾರೆ. ಯಾವ ಕಾರಣಕ್ಕೆ ಬಂದಿದ್ದು ಎಂದರೆ ಸಾಕ್ಷಿ ತೊಂದರೆ ಕೊಡುತ್ತಿದ್ದ ಕಾರಣ ಎಂದು ನುಡಿಯುತ್ತಾರೆ.

ಆರೋಪಿಯು ಬಂದಿದ್ದರಾ ಎಂದರೆ ಸಾಕ್ಷಿ ನನ್ನ ನಿಶ್ಚಿತಾರ್ಥಕ್ಕೆ ಬಂದಿದ್ದರು ಎಂದು ನುಡಿಯುತ್ತಾರೆ. ಊರಿಗೆ ಬಂದ ನಂತರ ಪೊಲೀಸ್ ದೂರು ನೀಡಿರುತ್ತೀರಾ ಎಂದರೆ ಸಾಕ್ಷಿ ಕುಂದಾಪುರ ಠಾಣೆಯಲ್ಲಿ ಮೇ 2016ರಲ್ಲಿ ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ನೀವು ದೂರು ನೀಡಲು ಹೋಗಿರುತ್ತೀರಾ ಎಂದರೆ ಸಾಕ್ಷಿ ಹೌದು ನಾನು ಮತ್ತು ನಮ್ಮ ಮನೆಯವರು ಎಲ್ಲಾ ಹೋಗಿರುತ್ತೇವೆ

ಎಂದು ನುಡಿಯುತ್ತಾರೆ. ಎಷ್ಟು ಜನರ ವಿರುದ್ದ ದೂರು ಕೊಟ್ಟಿರುತ್ತೀರಿ ಎಂದರೆ ಸಾಕ್ಷಿ 5 ಜನರ ವಿರುದ್ದ ಎಂದು ನುಡಿಯುತ್ತಾರೆ. ಸದ್ರಿ ದೂರಿನ ಮೇರೆಗೆ ಪ್ರ.ವ.ವರದಿ ಮಾಡಿರುತ್ತಾರಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಅದೇ ದಿನ ಪೊಲೀಸರು ಮನೆಗೆ ಬಂದಿರುತ್ತಾರಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ನೀವು ಹೇಳಿಕೆಯನ್ನು ಅದೇ ದಿನ ಕೊಟ್ಟಿರುತ್ತೀರಾ ಎಂದರೆ ಸಾಕ್ಷಿ ಹೌದು ಪೊಲೀಸರು ಮಹಜರು ಜರುಗಿಸಲು ಬಂದಾಗ ಹೇಳಿಕೆ ನೀಡಿರುತ್ತೇನೆ ಎಂದು ನುಡಿಯುತ್ತಾರೆ.

ಯಾವ ದಿನಾಂಕದಂದು ನಿಮ್ಮ ಹೇಳಿಕೆ ಪಡೆದಿರುತ್ತಾರೆ ಎಂದರೆ ಸಾಕ್ಷಿ ದಿಃ 26-05-2016 ರಂದು ನುಡಿಯುತ್ತಾರೆ. ಸದ್ರಿ ಹೇಳಿಕೆಯನ್ನು ಪೊಲೀಸರು ಬರೆದುಕೊಂಡಿರುತ್ತಾರಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಎಷ್ಟು ಬಾರಿ ಹೇಳಿಕೆ ಕೊಟ್ಟಿರುತ್ತೀರಿ ಎಂದರೆ ಸಾಕ್ಷಿ 1 ಬಾರಿ ಎಂದು ನುಡಿಯುತ್ತಾರೆ. ನಿಮ್ಮ ಹೇಳಿಕೆಯನ್ನು ಟೈಪು ಮಾಡಿರುತ್ತಾರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಯಾವ ಪೊಲೀಸ್ ಅಧಿಕಾರಿ ನಿಮ್ಮ ಹೇಳಿಕೆ ಪಡೆದಿರುತ್ತಾರೆ ಎಂದರೆ ಸಾಕ್ಷಿ ಗೊತ್ತಾಗುವುದಿಲ್ಲ ಎಂದು ನುಡಿಯುತ್ತಾರೆ.

ಚಾಸಾ-1 ರವರು ವಕೀಲರ ಮೂಲಕ ನ್ಯಾಯಾಲಯಕ್ಕೆ ಖಾಸಗಿ ಪಿರ್ಯಾದು ಸಲ್ಲಿಸಿದ್ದ ಬಗ್ಗೆ ಗೊತ್ತಿದಿಯಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಚಾಸಾ-1 ರವರು ಪೊಲೀಸ್ ಠಾಣೆಯಲ್ಲಿ ಕೊಟ್ಟ ದೂರಿನ ಪ್ರಕರಣದಲ್ಲಿ ನೀವು ಸಾಕ್ಷಿ ಹೇಳುತ್ತಿದ್ದರಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಮಹಜರಿಗೆ ಬಂದಾಗ ಯಾರೆಲ್ಲಾ ಇದ್ದರು ಎಂದರೆ ಸಾಕ್ಷಿ ನಮ್ಮ ಮನೆಯವರು ಮಾತ್ರ ಇದ್ದರು ಎಂದು ನುಡಿಯುತ್ತಾರೆ.

ನೀವು ಸುಳ್ಳು ಹೇಳುತ್ತಿದ್ದು ಚಾಸಾ-1 ರವರು ಯಾವುದೇ ದೂರನ್ನು ಕೊಟ್ಟಿರುವುದಿಲ್ಲ ಹಾಗೂ ಪೊಲೀಸರು ಮಹಜರನ್ನು ಜರುಗಿಸಿರುವುದಿಲ್ಲ ಹಾಗೂ ಪೊಲೀಸರು ನಿಮ್ಮನ್ನು ಯಾವುದೇ ವಿಚಾರಣೆ ಮಾಡಿರುವುದಿಲ್ಲ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ಪ್ರ.ವ.ವರದಿ ಯ ಪ್ರತಿಯನ್ನು ಪಡೆದುಕೊಂಡಿರುತ್ತೀರಾ ಎಂದರೆ ಸಾಕ್ಷಿ ಚಾಸಾ-1 ರವರು ಪಡೆದುಕೊಂಡಿರಬಹುದು ಎಂದು ನುಡಿಯುತ್ತಾರೆ. ಚಾಸಾ-1 ರವರ ವಿದ್ಯಾಭ್ಯಾಸ ಏನು ಎಂದರೆ Diploma Engeeiring ಎಂದು ನುಡಿಯುತ್ತಾರೆ. ಆರೋಪಿಯು ನಿಮ್ಮ ಮನೆಯವರಿಗೆ ರೂಪಾಯಿ 5 ಲಕ್ಷ ಹಣ ಹಾಗೂ ಚಿನ್ನವನ್ನು ಕೇಳಿದಿರುವುದಿಲ್ಲ ಹಾಗೂ ನೀವು ಆರೋಪಿಗೆ ಯಾವುದೇ ಹಣ ಮತ್ತು ಚಿನ್ನವನ್ನು ನೀಡಿರುವುದಿಲ್ಲ ಮತ್ತು ಆರೋಪಿಯು ಚಾಸಾ-1 ರವರ ಚೆಕ್ಕು ಮತ್ತು ಡೆಬಿಟ್ ಕಾರ್ಡನ್ನು ದುರಪಯೋಗಪಡಿಸಿಕೊಂಡಿರುವುದಿಲ್ಲ ಮತ್ತು ಆರೋಪಿಯ ತಮ್ಮ ಚಾಸಾ-1 ರವರಿಗೆ ಹಲ್ಲೆ

ಮಾಡಿರುವುದಿಲ್ಲ ಹಾಗೂ ಆರೋಪಿಗಳು ಚಾಸಾ-1 ರವರಿಗೆ ಹೆಚ್ಚಿನ ವರದಕ್ಷಿಣೆ ತರುವಂತೆ ತೊಂದರೆ ನೀಡಿರುವುದಿಲ್ಲ ಎಲ್ಲಾ ಸುಳ್ಳು ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ಸುಳ್ಳು ಇರುವುದಿಲ್ಲ ಎಂದು ನುಡಿಯುತ್ತಾರೆ. ನಿಮ್ಮ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಎಲ್ಲಾ ವಿಚಾರಗಳು ಸುಳ್ಳು ಎಂದರೆ ಸಾಕ್ಷಿ ಸುಳ್ಳು ಇರುವುದಿಲ್ಲ ಎಂದು ನುಡಿಯುತ್ತಾರೆ. ಆರೋಪಿಗಳು ಯಾವುದೇ ಮಾನಸಿಕ ಕಿರುಕುಳ ನೀಡಿರುವುದಿಲ್ಲ, ಆರೋಪಿಯ ಕಂಪೆನಿ ನಷ್ಟ ಅನುಭವಿಸಿದ್ದರಿಂದ ಚಾಸಾ-1 ರವರ ಬೇಡಿಕೆಗೆ ತಕ್ಕಂತೆ ಪೂರೈಸದ ಕಾರಣ ಚಾಸಾ-1 ರವರೇ ಆರೋಪಿಗಳ ಮನೆಯನ್ನು ಬಿಟ್ಟು ಬಂದಿರುತ್ತಾರೆ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ಚಾಸಾ-1 ರವರಿಗೆ ಆರೋಗ್ಯ ಸರಿ ಇಲ್ಲದೆ ಇದ್ದಾಗ ಹಾಗೂ ಮಗುವಿನ ಎಲ್ಲಾ ಖರ್ಚನ್ನು 1ನೇ ಆರೋಪಿ ನೋಡಿಕೊಳ್ಳುತ್ತಿದ್ದರು ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ.

ಚಾಸಾ-1 ರವರು ನೀಡಿದ ಒಂದು ಸುಳ್ಳು ದೂರಿಗೆ ಅನುಕೂಲಕ್ಕಾಗಿ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನಿಮ್ಮ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಎಲ್ಲಾ ಅಂಶಗಳು ಸುಳ್ಳು ಎಂದರೆ ಸಾಕ್ಷಿ ಸುಳ್ಳು ಇರುವುದಿಲ್ಲ ಎಂದು ನುಡಿಯುತ್ತಾರೆ.

**ಮರು ವಿಚಾರಣೆ:** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

**(ಶ್ರೀನಿವಾಸ ಕೆ.ಆರ್)**
**1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ. ದ. ನ್ಯಾ. ದಂ. ಕುಂದಾಪುರ**